# **ಕರ್ನಾಟಕ ಲೋಕಸೇವಾ ಆಯೋಗ,**

# **"ಉದ್ಯೋಗ ಸೌಧ" ಬೆಂಗಳೂರು-560001**

ಸಂಖ್ಯೆ: ಇ(1)1413/2020-21/ಪಿಎಸ್‌ಸಿ ದಿನಾಂಕ:19-06-2020

## **ಪ್ರಕಟಣೆ**

ಆಯೋಗವು ಅಧಿಸೂಚನೆ ಸಂಖ್ಯೆ:ಇ(1) 259/2018-19/ಪಿಎಸ್‌ಸಿ ದಿ:19-11-2018 ಹಾಗೂ ಇ(1) 265/2018-19/ಪಿಎಸ್‌ಸಿ, ದಿ:22-11-2018ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿರುವ **ಅಲ್ಪಸಂಖ್ಯಾತರ ಇಲಾಖೆಯ ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರು ಮತ್ತು ವಿವಿಧ ವಿಷಯಗಳ ಸಹ ಶಿಕ್ಷಕರುಗಳ** ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ:06-02-2020, 14-02-2020, 10-03-2020 ಮತ್ತು 24-04-2020 ರಂದು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅರ್ಹತಾ ಪಟ್ಟಿಯಂತೆ, ಸಂದರ್ಶನ/ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳು ಸದರಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿಯಲ್ಲಿ ಕೋರಲಾದ ಮೀಸಲಾತಿಗಳಿಗನುಗುಣವಾಗಿ ಪೂರಕ ಪ್ರಮಾಣ ಪತ್ರಗಳು, ಜನ್ಮ ದಿನಾಂಕ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪೂರಕ ಪ್ರಮಾಣ ಪತ್ರಗಳನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿ, ಅಭ್ಯರ್ಥಿಯ ಸಹಿ, ಹೆಸರು, ನೋಂದಣಿ ಸಂಖ್ಯೆಯನ್ನು ನಮೂದಿಸಿದ ಎರಡು ಜೆರಾಕ್ಸ್ ಪ್ರತಿಗಳನ್ನು ಎರಡು ಭಾವಚಿತ್ರ ಮತ್ತು ಯಾವುದಾದರೊಂದು ಗುರುತಿನ ಚೀಟಿಯೊಂದಿಗೆ **ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001. ಈ ವಿಳಾಸಕ್ಕೆ ಮುಖ್ಯೋಪಾಧ್ಯಾಯರು ಹುದ್ದೆಗಳ ಅಭ್ಯರ್ಥಿಗಳು ದಿನಾಂಕ: 26-06-2020ರೊಳಗೆ ಹಾಗೂ ವಿವಿಧ ವಿಷಯಗಳ ಸಹ ಶಿಕ್ಷಕರ (ಕನ್ನಡ, ಇಂಗ್ಲೀಷ್, ಉರ್ದು, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ) ಹುದ್ದೆಗಳ ಅಭ್ಯರ್ಥಿಗಳು ದಿನಾಂಕ:01-07-2020ರೊಳಗೆ ತಲುಪುವಂತೆ ಈಗಾಗಲೇ ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿದ್ದು, ಸದರಿ ದಾಖಲೆಗಳನ್ನು ಕಡ್ಡಾಯವಾಗಿ ಸ್ಪೀಡ್‌ಪೋಸ್ಟ್ ಮೂಲಕ ಮಾತ್ರ ಸಲ್ಲಿಸುವಂತೆ ತಿಳಿಸಿದೆ.** ಕೋವಿಡ್-19 ಅನ್ನು ನಿಯಂತ್ರಿಸುವ ಸಲುವಾಗಿ ಯಾವುದೇ ಕಾರಣಕ್ಕೂ ಆಯೋಗಕ್ಕೆ ಖುದ್ದಾಗಿ ಭೇಟಿ ನೀಡಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದಿಲ್ಲ.

**ಸೂಚನೆ:** ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯಂತೆ ಕ್ರಮಬದ್ಧವಾದ ದಾಖಲೆಗಳನ್ನು ಒದಗಿಸತಕ್ಕದ್ದು. ಯಾವುದೇ ಮೀಸಲಾತಿಯ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಇದ್ದಲ್ಲಿ ಅಥವಾ ನ್ಯೂನ್ಯತೆ ಇರುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಅಂತಹವರ ಸಂಬಂಧಪಟ್ಟ ಮೀಸಲಾತಿಗಳನ್ನು ರದ್ದುಪಡಿಸಲಾಗುವುದು. ಸಂದರ್ಶನದ ದಿನ ತಾವು ದಾಖಲೆಗಳ ಪರಿಶೀಲನೆಗೆ ಅಂಚೆ ಮೂಲಕ ರವಾನಿಸಲಾಗುವ ಲಗತ್ತುಗಳ ಪ್ರತಿಗಳ ಮೂಲ ದಾಖಲೆಗಳನ್ನು ಹಾಜರುಪಡಿಸುವ ಷರತ್ತಿಗೊಳಪಟ್ಟಂತೆ ತಮ್ಮನ್ನು ಸಂದರ್ಶನಕ್ಕೆ ಅರ್ಹರಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ತಪ್ಪು ಮಾಹಿತಿ/ದಾಖಲೆ ನೀಡುವ ಅಭ್ಯರ್ಥಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

**ಲಕೋಟೆಯ ಮೇಲೆ ತಾವು ಅರ್ಹರಾಗಿರುವ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು**

**ಸಹಿ/-**
ಸಹಾಯಕ ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.